ದಿನಾಂಕಃ 05-12-2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಪಿ.ಟಿ ಪ್ರತಿವಾದಿಗಳ ಪರ ವಕೀಲರಿಂದಃ 3. ದಾವಾ ಆಸ್ತಿಗಳು ಚಿಕ್ಕಪ್ಪನ ಹೆಸರಿನಲ್ಲಿವೆ ಅಂದರೆ ಸರಿಯಲ್ಲ, ಅವರ ತಂದೆ ಕರಿಯಪ್ಪನ ಹೆಸರಿನಲ್ಲಿವೆ. ಕರಿಯಪ್ಪನಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು. ಚಿಕ್ಕಪ್ಪ ನನ್ನ ಮಾವ. ಗಿರಿಯಮ್ಮ ನನ್ನ ಅತ್ತೆ. ಕರಿಯಪ್ಪ ನನ್ನ ಮೈದುನ. ಗಿರಿಯಮ್ಮ, ಕರಿಯಪ್ಪ ಮತ್ತು ನಿಂಗಪ್ಪ ಇವರು 20 ವರ್ಷದ ಹಿಂದೆ ಪಾಲು ವಿಭಾಗ ಮಾಡಿಕೊಂಡಿದ್ದಾರೆ ಅಂದರೆ ಸರಿಯಲ್ಲ, ಅನುಭವದ ಮೇಲೆ ಆಸ್ತಿಗಳನ್ನು ಮಾಡುತ್ತಿದ್ದರು. ನನ್ನ ಪತಿಯ ಭಾಗಕ್ಕೆ ಬಂದ ಆಸ್ತಿಗಳನ್ನು ನಾನು ಅನುಭವಿಸುತ್ತಿದ್ದೇನೆ ಮತ್ತು ಸಾಗುವಳಿ ಮಾಡುತ್ತಿದ್ದೇನೆ ಅಂದರೆ ಅನುಮತಿಯ ಮೇರೆಗೆ ಅನುಭವಿಸುತ್ತಿದ್ದೇನೆ.

4. ಹಾರಕಭಾವಿ ಸರ್ವೆ ನಂಬರ 331/1 ರ 7.20 ಎಕರೆ ಜಮೀನಿನಲ್ಲಿ 3.75 ಎಕರೆ ಜಾಗ ನನ್ನ ಪತಿಯ ಭಾಗಕ್ಕೆ ಬಂದಿದೆ ಅಂದರೆ ಸರಿಯಲ್ಲ, ಅನುಮತಿಯ ಮೇರೆಗೆ ಮಾಡುತ್ತಿದ್ದೇನೆ. ಸರ್ವೆ ನಂಬರ 527 ಇ ರಲ್ಲಿ 4.87 ಎಕರೆಯಲ್ಲಿ ನನ್ನ ಪತಿಯ ಭಾಗಕ್ಕೆ 2.43 ಎಕರೆ ಬಂದಿದೆ ಅಂದರೆ ಸರಿಯಲ್ಲ. ಬಣವಿಕಲ್ ಗ್ರಾಮದ ಮನೆ ಸಂಖ್ಯೆ 22 ನನ್ನ ಪತಿಯ ಭಾಗಕ್ಕೆ ಬಂದಿದೆ ಅಂದರೆ ಸರಿಯಲ್ಲ, ಅದು ನನ್ನ ಮಾನ ಹೆಸರಿನಲ್ಲಿತ್ತು ಸರ್ಕಾರದ ಯೋಜನೆಯ ಮೂಲಕ ಮನೆ ಕಟ್ಟಿಸಿಕೊಂಡಿದ್ದೇವೆ. ಸದರಿ ಮನೆಯ ಭೂ ಸ್ವಾಧೀನಕ್ಕೆ ಸಂಬಂಧಪಟ್ಟಂತೆ ನಾನು ರೂ. 7,80,404/- ಗಳನ್ನು ಪರಿಹಾರವಾಗಿ ಪಡೆದಿದ್ದೇನೆ ಅಂದರೆ ಸರಿ. ಸದರಿ ಮನೆ ಮತ್ತು ಕರಿಯಪ್ಪನ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿ. ಪಾಲು ವಿಭಾಗದಲ್ಲಿ ಕರಿಯಪ್ಪನಗ ಭಾಗಕ್ಕೆ 6.27 ಎಕರೆ ಬಂದಿರುತ್ತದೆ ಮತ್ತು ಅವರೇ ಸಾಗುವಳಿ ಮಾಡುತ್ತಿದ್ದಾರೆ ಅಂದರೆ ಪಾಲು ವಿಭಾಗವಾಗಿಲ್ಲ ಅನುಮತಿಯ ಮೇರೆಗೆ ಮಾಡುತ್ತಿದ್ದಾರೆ. ಗಿರಿಯಮ್ಮನಿಗೆ ಪಾಲು ವಿಭಾಗದಲ್ಲಿ 4.52 ಸೆಂಟ್ಸ ಬಂದಿದೆ ಅಂದರೆ ಮೋಸದಿಂದ ಮಾಡಿಕೊಂಡಿದ್ದಾರೆ.

ಪಿಡಬ್ಲ್ಯೂ-1
ಓ ಎಸ್ 85/2018

5. ನಾಗಮ್ಮ ನನ್ನ ಮೈದುನನ ಪತ್ನಿ . ಕರಿಯಪ್ಪ ಮತ್ತು ಗಿರಿಯಮ್ಮ ತಮ್ಮ ತಮ್ಮ ಭಾಗದ ಆಸ್ತಿಗಳು ಮತ್ತು ನನ್ನ ಪತಿಯ ಭಾಗಕ್ಕೆ ಬಂದ ಅಸ್ತಿಗಳನ್ನು ಖಾತೆ ಮಾಡಿಸಿಕೊಳ್ಳಲು ಸಾಕಷ್ಟು ಸಲ ಕರೆದಿದ್ದಾರೆ ಅಂದರೆ ಸರಿಯಲ್ಲ. ಊರಿನ ಯಜಮಾನರೂ ಸಹ ಅನೇಕ ಸಲ ಈ ಬಗ್ಗೆ ನನಗೆ ತಿಳಿಸಿದ್ದಾರೆ ಅಂದರೆ ಸರಿಯಲ್ಲ. ಗಿರಿಯಮ್ಮ ದಾನ ಮಾಡಿರುವ ಅಸ್ತಿಗಳ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಅಂದರೆ ಸರಿಯಲ್ಲ. ನನ್ನ ಪತಿಯ ಭಾಗಕ್ಕೆ ಬಂದ ಅಸ್ತಿಗಳ ಮೇಲೆ ಮಾತ್ರ ನನಗೆ ಅಧಿಕಾರವಿದೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿರುತ್ತದೆ ಅನ್ನುವುದು ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿಂ.ಸಿ.ಜೆ. ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.